Appropriation Bills, 1972—Introduction

MADAM SPEKER.—The Governor has recommended the introduction of the two Appropriation Bills before the House. The Hon'ble Finance Minister may introduce the Bills.

Sri M. Y. GHORPADE (Minister for Finance).—I beg to introduce the following Bills:—

(i) The Mysore Appropriation Bill, 1972,

(ii) The Mysore Appropriation (Vote on Account) Bill, 1972.

MADAM SPEAKER.—These Bills are introduced.

Sri T. R. SHAMANNA.—Many of the members are new. So, it will be helpful if the Hon'ble Finance Minister gives some clarifications regarding these bills, so that the new members might know the implications.

Sri M. Y. GHORPADE (Minister for Finance).—There are no implications; we have fully discussed. The rules demand that it should be moved in the form of an Appropriation Bill. There is no new element involved; it is purely procedural.

Mysore Appropriation Bill, 1972—Motion to consider

Sri M. Y. GHORPADE (Minister for Finance).—I beg to move:

"That the Mysore Appropriation Bill, 1972, be taken into consideration."

MADAM SPEAKER.—Motion moved:

"That the Mysore Appropriation Bill, 1972, be taken into consideration".

† ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯವರೇ, ಈಗ ನಭೆಯಮುಂದೆ ಇರತಕ್ಕ ಎರಡು ಅಪ್ರೊಪ್ರಿಯೇಷನ್ ಮಸೂದೆಗಳಿಗೆನಿ ಇದರ ಬಗ್ಗೆ ನಾನು ಹೆಚ್ಚು ಮಾತನಾಡ ತಕ್ಕ ಪ್ರಮೇಯವೇನೂ ಇಲ್ಲ ಎಂದು ಕಾಣುತ್ತದೆ. ಇದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಬಯನುವುದೂ ಇಲ್ಲ. ಆದರೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮಾತ್ರ ನಾನು ಮಾನ್ಯ ಅಧ್ಯಕ್ಷಣಿಯವರ ಮುಖಾಂತರ ಮಾನ್ಯ ಹಣಕಾಸಿನ ಮಂತ್ರಿಗಳ ಗಮನಕ್ಕೆ ತರಬಯನುತ್ತೇನೆ. ಗುಲ್ಬರ್ಗಾದಲ್ಲಿ 18 ಜನ ನೌಕರರನ್ನು ಮಾರ್ಚ್ 31 ರಲ್ಲಿ ರಿಟ್ರೆಂಚ್ ಮಾಡುತ್ತಾರೆ ಎಂದು ನನಗೆ ಅಲ್ಲಿಂದ ಟೆಲಿಗ್ರಾಂ ಬಂದಿದೆ. ಅದನ್ನು ನಾನು ಮಾನ್ಯ ಅಧ್ಯಕ್ಷಣಿಯವರ ಮುಖಾಂತರ ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಇದನ್ನು ದಯವಿಟ್ಟು ವಿಚಾರ ಮಾಡಬೇಕು. ಈಗ 18 ಜನ ನೌಕರರನ್ನು ಗುಲ್ಬರ್ಗಾದಲ್ಲಿ ಏನು ರಿಟ್ರೆಂಚ್ ಮಾಡಬೇಕೆಂದಿದ್ದಾರೆ ಅವರು ಪಿ.ಎಸ್.ಸಿ. ಕ್ಯಾಂಡಿಡೇಟ್ಸ್. ಈಗ ಅವರನ್ನು ರಿಟ್ರೆಂಚ್ ಮಾಡುವುದರಿಂದ ಅವರ ಸರ್ವೀಸ್ ಬ್ರೇಕಾಗುತ್ತದೆ. ಅವರಿಗೆ ಕಂಟಿನ್ಯುಟಿ ಆಫ್ ಸರ್ವೀಸ್ ಸಿಕ್ಕುವುದಿಲ್ಲ. ಆದ್ದರಿಂದ ಈ ಬಗ್ಗೆ

† Indicates that remarks or speeches have not been revised by the member concerned.

ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗ ಈ ಅಪ್ರೋಪ್ರಿಯೇಷನ್ ಬಿಲ್ಲನ್ನೇನೋ ಅಂಗೀಕಾರ ಮಾಡುತ್ತೇವೆ, ಆದರೆ ಎಲ್ಲಾ ಕಡೆಗಳಲ್ಲಿಯೂ ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡಲು ಸರ್ಕಾರದವರು ತಮ್ಮ ಗಮನವನ್ನು ಹರಿಸಬೇಕು. ಈಗ ತಾವೇನೋ ಚುನಾವಣೆಯಲ್ಲಿ ಹುರುಪಿನಿಂದ ಗೆದ್ದು ಬಂದಿದ್ದೀರಿ, ಆದರೆ ಚುನಾವಣೆಯ ಕಾವು ಇನ್ನೂ ಉಳಿದಿದೆ. ಈ ಸಂದರ್ಭದಲ್ಲಿ ಸರ್ಕಾರದವರು ಎಲ್ಲಾ ಜನತೆಯ ಕ್ಷೇಮಾಭ್ಯುದಯವನ್ನು ನೋಡತಕ್ಕದ್ದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ದೇಶದ ಜನತೆಗೆ ಕಲ್ಯಾಣವನ್ನುಂಟು ಮಾಡತಕ್ಕಂಥ ಕೆಲಸವನ್ನು ಮಾಡಬೇಕು, ಎಲ್ಲಿ ಅವಶ್ಯಕವಾಗಿ ಖರ್ಚುಗಳನ್ನು ಮಾಬೇಕೋ ಅದನ್ನು ಮಾಡಿ ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಬೈರೇಗೌಡ (ಪೇಮಗಲ್).—ಮಾನ್ಯ ಅಧ್ಯಕ್ಷಿಣಿಯವರೇ, ಈ ಸಂದರ್ಭದಲ್ಲಿ ನಾನು ಹೆಚ್ಚು ಮಾತನಾಡುವುದಕ್ಕೆ ಬಯಸುವುದಿಲ್ಲ, ಒಂದೇ ಒಂದು ವಿಷಯವನ್ನು ಮಾತ್ರ ನಾನು ಸರ್ಕಾರದ ಗಮನಕ್ಕೆ ತರಬೇಕೆಂದು ಬಯಸುತ್ತೇನೆ. ಈಗ ನಮ್ಮ ರಾಜ್ಯದಲ್ಲಿ 106 ತಾಲ್ಲೂಕುಗಳಲ್ಲಿ ಕ್ಷಾಮ ಪರಿಸ್ಥಿತಿ ಇದೆಯೆಂದು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ಈ ತಾಲ್ಲೂಕುಗಳಲ್ಲಿ ರೈತರಿಗೆ ಸರ್ಕಾರದವರು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಮತ್ತು ತಕಾವಿ ಲೋನುಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಈ ಬಾಬಿಗೆ ಸರ್ಕಾರದವರೇನೋ ಹಣವನ್ನು ಒದಗಿಸಿದ್ದಾರೆ. ಆದರೆ ಈಗ ನನಗೆ ಬಂದಿರುವ ವರ್ತಮಾನದ ಪ್ರಕಾರ ಸಾಲಗಳನ್ನು ಯಾವುದನ್ನೂ ಕೊಡಬಾರದು ಎಂದು ಸರ್ಕಾರ ಆದೇಶವನ್ನು ಎಲ್ಲಾ ಕಡೆಗೂ ಕಳುಹಿಸಿದೆ ಎಂದು ತಿಳಿದು ಬಂದಿದೆ. ಈ ರೀತಿಯಾಗಿ ಸರ್ಕಾರದವರು ಆದೇಶವನ್ನು ಕಳುಹಿಸಿರುವುದು ಸರಿಯಲ್ಲ. ಈ ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿ ಇದೆಯೆಂದು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ನಾನು ಕೂಡ ನಮ್ಮ ತಾಲ್ಲೂಕಿನಲ್ಲಿ ತಾಲ್ಲೂಕು ಅಭಿವೃದ್ಧಿಯ ಮಂಡಲಯ ಸದಸ್ಯನಾಗಿದ್ದೆ. ನನಗೆ ಅಲ್ಲಿನ ಪರಿಸ್ಥಿತಿ ಏನು ಎಂಬುದು ಗೊತ್ತಿದೆ. ಆ ಪ್ರದೇಶದಿಂದ ನನಗೆ ಸರ್ಕಾರದವರು ಸಾಲಗಳನ್ನು ನಿಲ್ಲಿಸಿರುವ ಬಗ್ಗೆ ವರ್ತಮಾನ ಕೂಡ ಬಂದಿದೆ. ಈ ಅಭಾವ ಪೀಡಿತವಾದ ಪ್ರದೇಶಗಳಲ್ಲಿ ಈಗ 3-4 ತಿಂಗಳಿಂದ ಮಳೆಯಾಗಿಲ್ಲ. ಅಲ್ಲಿನ ಜನಗಳು ಉದ್ಧಾರವಾಗಬೇಕಾದರೆ ಅವರಿಗೆ ಸಾಲದ ಸೌಲಭ್ಯವನ್ನು ಒದಗಿಸಿಕೊಡಬೇಕು. ಅಲ್ಲಿನ ರೈತರು ಎತ್ತು ಗಾಡಿಗಳನ್ನು ಕೊಂಡುಕೊಳ್ಳುವುದಕ್ಕೆ ಹೊಲಗದ್ದೆಗಳನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಲ್ಯಾಂಡ್ ಇಂಪ್ರೂವ್‌ಮೆಂಟ್ ಮತ್ತು ತಕಾವಿ ಸಾಲಗಳನ್ನು ಕೊಡುವಂತೆ ವ್ಯವಸ್ಥೆ ಮಾಡಬೇಕು. ಈಗ ಸರ್ಕಾರದವರು ಸಾಲವನ್ನೇನೂ ಕೊಡಬಾರದೆಂದು ಆದೇಶವನ್ನು ಹೊರಡಿಸಿದ್ದಾರೆ. ಅದನ್ನು ವಾಪಸು ತೆಗೆದುಕೊಳ್ಳಬೇಕೆಂದು ಮಾನ್ಯ ಅರ್ಥ ಸಚಿವರಲ್ಲಿ ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

†ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ).—ಸ್ವಾಮಿ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಕ್ಷಾಮ ಪರಿಸ್ಥಿತಿ ಇದ್ದು ಹಿಂಗಾರು ಮತ್ತು ಮುಂಗಾರು ಎರಡು ಬೆಳೆಗಳೂ ಹೋಗಿರುವುದರಿಂದ ಆ ಪ್ರದೇಶದ ಜನಗಳಿಗೆ ಸಾಕಷ್ಟು ಪರಿಹಾರವನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಏನಂತಿ ಮಾಡಿಕೊಳ್ಳುತ್ತೇನೆ. ಆ ಪ್ರದೇಶದ ರೈತರಿಗೆ ಲ್ಯಾಂಡ್ ರೆವಿನ್ಯೂ ಸೂಟಮಾಡಬೇಕು ಮತ್ತು ತಗಾಯಿಸಾಲವನ್ನು ವಸೂಲು ಮಾಡುವುದನ್ನು ಮುಂದೆ ಹಾಕಬೇಕು. ಮತ್ತು ಆ ಪ್ರದೇಶದ ಜನತೆಗೆ ಎಲ್ಲಾ ವಿಧವಾದ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಮಾನ್ಯ ಅಧ್ಯಕ್ಷಿಣಿಯವರ ಮುಖಾಂತರ ನಾನು ಸರ್ಕಾರಕ್ಕೆ ಏನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷಣಿಯವರೇ ನಾನು ಮೊನ್ನೆ ಒಂದು ವಿಷಯವನ್ನು ಹೇಳಿದ್ದೆ. ಆದರೆ ಅದಕ್ಕೆ ಮಾನ್ಯ ಅರ್ಥ ಸಚಿವರಿಂದ ಸಮಂಜಸವಾದ ಉತ್ತರ ಸಿಕ್ಕಲಿಲ್ಲ. ಆದ್ದರಿಂದ ಆ ವಿಷಯಕ್ಕೆ ಮಾನ್ಯ ಅರ್ಥ ಮಂತ್ರಿಗಳಿಂದ ಸಮಂಜಸವಾದ ಉತ್ತರವನ್ನು ಪಡೆಯಬೇಕೆಂಬ ದೃಷ್ಟಿಯಿಂದ ಈಗ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಅರ್ಥ ಮಂತ್ರಿಗಳು ಈ ಸಭೆಯವರನ್ನು ಎಷ್ಟೇ ಹಣವನ್ನು ಕೇಳಿ ಅದನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಇಪ್ಪೊತ್ತಿನ ದಿವಸ ನಮ್ಮ ರಾಜ್ಯದ ಆರ್ಥಿಕ ಸ್ಥಿತಿಯ ಬಗ್ಗೆ ಎಲ್ಲಾ ಪಕ್ಷದ ಸದಸ್ಯರೊಡನೆಯೂ, ಅದರಲ್ಲೂ ಮುಖ್ಯವಾಗಿ ವಿರೋಧ ಪಕ್ಷದವರೊಡನೆ ವಿಚಾರ ವಿನಿಮಯಮಾಡಿ ವಿಷಯಗಳನ್ನು ಸಂಗ್ರಹಣೆ ಮಾಡಬೇಕು. ರಾಜ್ಯ ಸರ್ಕಾರಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ಹಣಕಾಸಿನ ವಿಷಯದಲ್ಲಿ ಸಂಪರ್ಕ ಏನಿದೆ, ಇದರ ವಿಷಯದಲ್ಲಿ ಸಂಬಂಧ ಹೇಗಿರಬೇಕು ಎನ್ನುವ ವಿಷಯ ಗೊತ್ತಿರಬೇಕು. ಇದು ಜಟಿಲವಾದ ವಿಷಯ. ರಾಜ್ಯಗಳ

(ಶ್ರೀ ಎಂ. ಎಸ್. ಕೃಷ್ಣನ್)

ಮತ್ತು ಕೇಂದ್ರಗಳ ಸಂಬಂಧದಲ್ಲಿ ಕೆಲವು ಕಡೆ ತಿಕ್ಕಾಟಗಳು ಇವೆ, ಕೆಲವು ಕಡೆ ಬೇರೆನೇ ಆಗಬೇಕೆಂದು ಹೇಳುತ್ತಿದ್ದಾರೆ. ಅಂತೂ ನಮಗೂ ಕೇಂದ್ರಕ್ಕೂ ಒಳ್ಳೆಯ ಸಂಪರ್ಕ ಇರಬೇಕು. ರಾಜ್ಯದಲ್ಲಿ ಐಕ್ಯತೆ ಇರಬೇಕೆಂದು ಹೇಳತಕ್ಕಂತಹ ತತ್ವ ಮುಖ್ಯವಾದಂತಹ ವಿಷಯ. ಇನ್ನು ಆರ್ಥಿಕ ವಿಷಯಗಳ ಬಗ್ಗೆ ರಾಜಮನ್ನಾರ್ ಕಮಿಟಿಯಲ್ಲಿ ಬಹಳವಾಗಿ ಹೇಳಿದ್ದಾರೆ. ಅದರಲ್ಲೆ ರುವಂತಹ ಎಲ್ಲವನ್ನೂ ಒಪ್ಪಿಕೊಳ್ಳಬೇಕೆಂದು ನಾನು ಹೇಳುತ್ತಾ ಇಲ್ಲ. ಆದರೆ ಆ ಕಮಿಟಿ ರಿಪೋರ್ಟಿನಲ್ಲಿ ಹೇಳಿದಂತಹ ಮುಖ್ಯವಾದ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ನಮ್ಮ ರಾಜ್ಯದ ಆರ್ಥಿಕ ಧೋರಣೆಯನ್ನು ರೂಪಿಸಿಕೊಳ್ಳಿ ಎಂದು ಹೇಳುತ್ತಿದ್ದೇನೆ. ಅಲ್ಲದೆ ನಮ್ಮ ಆರ್ಥಿಕ ಸಮಸ್ಯೆಯನ್ನು ಕೂಲಂಕಷವಾಗಿ ಪರ್ಯಾಲೋಚಿಸಲು ಈ ಮನೆಯ ಒಂದು ಕನ್ ಸಲ್ಟೇಟಿವ್ ಕಮಿಟಿ ಮಾಡಿ ಎಂದು ನಮ್ಮ ಮಾನ್ಯ ಮಿತ್ರರಾದ ವಿ. ಎನ್. ಪಾಟೀಲರವರು ಸೂಚನೆ ಮಾಡಿದ್ದರು. ಅದನ್ನು ಕೂಡ ಗಮನಕ್ಕೆ ತೆಗೆದುಕೊಂಡು ಮುಂದೆ ಹೋಗಬೇಕೆಂದು ಮಾನ್ಯ ಅರ್ಥ ಸಚಿವರಿಗೆ ಸಲಹೆ ಮಾಡುತ್ತೇನೆ.

†ಶ್ರೀ ಎಂ.ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಕೃಷ್ಣನ್‌ರವರು ಬಹಳ ಮುಖ್ಯವಾದಂತಹ ವಿಷಯವನ್ನು ಹೇಳಿದ್ದಾರೆ. ನಾನು ಅದರ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಕೇಂದ್ರ ಮತ್ತು ರಾಜ್ಯಗಳ ಸಂಬಂಧದಲ್ಲಿ, ಅಂದರೆ ಅದು ಆರ್ಥಿಕ ಸಂಬಂಧದಲ್ಲಿ ಇರಬಹುದು, ಅಥವಾ ಇತರ ವಿಚಾರಗಳಲ್ಲಿ ಇರಬಹುದು ಮಾನ್ಯ ಸದಸ್ಯರುಗಳು ಸೂಚನೆಗಳನ್ನು ಕೊಟ್ಟರೆ ಅದನ್ನು ನಾವು ಸ್ವಾಗತಿಸುತ್ತೇವೆ, ಮತ್ತು ನಾವು ಅವರನ್ನು ಕನ್‌ಸಲ್ಟ್ ಮಾಡಿಯೇ ಮಾಡುತ್ತೇವೆ. ಮತ್ತು ಈ ಮನೆಯ ಕನ್‌ಸಲ್ಟೇಟಿವ್ ಕಮಿಟಿ ನೇಮಕ ಮಾಡುವ ವಿಚಾರದಲ್ಲಿ ನಾನು ಈಗ ಏನೂ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಅದನ್ನು ಮುಖ್ಯ ಮಂತ್ರಿಯವರು ಎಲ್ಲಾ ಪರಿಶೀಲಿಸಿ ಒಂದು ಪಾಲಿಸಿಯ ರೀತಿಯಲ್ಲಿ ಮಾಡಬೇಕಾಗುತ್ತದೆ. ಆದ್ದರಿಂದ ಅವರ ಬಗ್ಗೆ ನಾನು ಏನೂ ಈಗ ಹೇಳಲಾಗುವುದಿಲ್ಲ. ಆದರೆ ಕನ್‌ಸಲ್ಟೇಶನಿಗೆ ಸಾಕಷ್ಟು ಅವಕಾಶ ಇರುತ್ತದೆ. ಅದಕ್ಕೆ ಯಾವ ಅನುಮಾನವೂ ಇರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಅದಕ್ಕೆ ತಮ್ಮ ವಿರೋಧವೇನೂ ಇಲ್ಲವೇ?

ಶ್ರೀ ಎಂ. ವೈ. ಘೋರ್ಪಡೆ.—ನನ್ನ ವಿರೋಧವೇನೂ ಇಲ್ಲ.

MADAM SPEAKER.—I will put the Bill to the vote of the House. The question is :

"That the Mysore Appropriation Bill, 1972 be taken into consideration.

The motion was adopted.

CLAUSES

MADAM SPEAKER.—I will put the clauses and schedule of the Bill. The question is :

"That clauses 2, 3 and Schedule do stand part of the Bill."

The motion was adopted.

Clauses 2 and 3 and Schedule were added to the Bill.

MADAM SPEAKER.—The question is :

" That clause 1, the long title and the enacting formula do stand part of the Bill."

The motion was adopted.

Clause 1, the long title and the enacting formula were added to the Bill.

Motion to pass.

Sri M. Y. GHORPADE (Minister for Finance).—I beg to move

"That the Mysore Appropriation Bill, 1972, be passed."

MADAM SPEAKER.—The question is :

"That the Mysore Appropriation Bill, 1972, be passed"-

The motion was adopted and the Bill was passed.

Mysore Appropriation (Vote on Account) Bill 1972–Motion to consider

Sri M. Y. GHORPADE (Minister for Finance),—I beg to move

"That the Mysore Appropriation (Vote on Account) Bill, 1972 be taken into consideration."

MADAM SPEAKER.—Motion moved : I will put the motion to the vote of the Home . The question is :

"That the Mysore Appropriation (Vote on Account) Bill, 1972 be taken into consideration."

The motion was adopted.

CLAUSES

MADAM SPEAKER.—I will put the clauses and Schedule to the vote of the House. The question is :

"That clauses 2 and 3 and Schedule do stand part of the Bill".

The motion was adopted.

Clauses 2 and 3 and Schedule were added to the Bill.

MADAM SPEAKER.—The question is :

" That clause 1, the long title and the enacting formula do stand part of the Bill."

The motion was adopted.

Clause 1, the long title and the enacting formula were added to the Bill.

Motion to pass.

Sri M. Y. GHORPADE (Minister for Finance).—I beg to move.

"That the Mysore Appropriation (Vote on Account) Bill, 1972, be passed."